**IN THE COURT OF THE SENIOR CIVIL JUDGE AND JMFC, TIPTUR.**

**CC No. 650/2018 DW - 1**

**The Witness is Administered Oath on 19.02.2024**

**Cross Examination by: Sri. HPM Counsel for Complainant**

ನಾನು ಮತ್ತು ಫಿರ್ಯಾದಿ ಇಬ್ಬರು ಸಹ ಎಪಿಎಂಸಿ ತಿಪಟೂರಿನಲ್ಲಿ ಕೊಬ್ಬರಿ ವ್ಯವಹಾರ ಮಾಡುತ್ತಿದ್ದೆವು ಎಂದರೆನಿಜ. 2018 ರಲ್ಲಿ ಫಿರ್ಯಾದಿಯ ವ್ಯವಹಾರದಲ್ಲಿ ನಷ್ಟವಾಗಿತ್ತು ಎಂದು ಹೇಳಿದ್ದು, ಆ ಬಗ್ಗೆ ದಾಖಲೆ ಕೊಟ್ಟಿಲ್ಲ. ನಾನು ಫಿರ್ಯಾದಿ ನನ್ನ ಬಳಿ 7 ಲಕ್ಷ ರೂ ಸಾಲ ಕೇಳಿದ್ದರು ಮತ್ತು ನನ್ನ ಬಳಿ ಇರುವುದಿಲ್ಲ ಇನ್ನೊಬ್ಬರ ಬಳಿ ಕೊಡಿಸುತ್ತೇನೆಂದು ಫಿರ್ಯಾದಿಗೆ ಹೇಳಿದ್ದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆ ರೀತಿ ಯಾವುದೇ ವ್ಯವಹಾರ ನಡೆಯದೇ ಇದ್ದರೂ ಸಹ ಸೃಷ್ಟಿ ಮಾಡಿಕೊಂಡು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಕೀಲರ ಮೂಲಕ ಫಿರ್ಯಾದಿ ಕೊಟ್ಟಂತಹ ನೋಟೀಸ್ ನ್ನು ನಾನು ನಮ್ಮ ಅಂಗಡಿಯಲ್ಲಿಯೇ ಪಡೆದಿರುತ್ತೇನೆ ಎಂದರೆ ಸರಿಯಲ್ಲ. ನಿಪಿ 10 ರಲ್ಲಿರುವ ಸಹಿಯು ನನ್ನದು ಆಗಿರುವುದಿಲ್ಲ ಅದು ಯಾರಿಗೆ ಸೇರಿದ್ದಾಗಿದೆ ಎಂದು ನನಗೆ ಗೊತ್ತಿಲ್ಲ.

2018 ರಲ್ಲಿ ನನಗೆ ಸೇರಿದ ಒಂದು ಚೆಕ್ ಕಳೆದುಹೋಗಿತ್ತು ಎಂದು ಹೇಳಿದ್ದು, ಆ ಬಗ್ಗೆ ಪೋಲೀಸರಿಗೆ ದೂರು ಕೊಟ್ಟಿಲ್ಲ. ನಾನು ಸ್ಟಾಪ್ ಪೇಮೆಂಟ್ ಮಾಡಿಸಿದ್ದೆ ಎಂದು ಹೇಳಿದ್ದು, ಆ ಬಗ್ಗೆ ಆಗಲೀ ಅಥವಾ ಚೆಕ್ ಕಳೆದ ಬಗ್ಗೆ ಆಗಲೀ ಪತ್ರಿಕಾ ಪ್ರಕಟಣೆ ಕೊಟ್ಟಿರಲಿಲ್ಲ. ಆ ರೀತಿ ಪತ್ರಿಕಾ ಪ್ರಕಟಣೆ ಕೊಡಲು ತೊಂದರೆ ಇರಲಿಲ್ಲ. ನನ್ನ ಮತ್ತು ಫಿರ್ಯಾದಿಯ ನಡುವೆ ಆದಂತಹ ವ್ಯವಹಾರದ ಬಗ್ಗೆ ಮಾತ್ರ ಈ ಪ್ರಕರಣ ನಡೆಯುತ್ತಿದೆ ಮತ್ತು ಬೇರೆ ಯಾವುದೇ ವ್ಯವಹಾರಕ್ಕೆ ಸಂಬಂದಪಡುವುದಿಲ್ಲ ಎಂದರೆ ಸರಿಯಲ್ಲ. ಕ್ಯಾಶ್ ಡ್ರಾಯರ್ ನಲ್ಲಿ ನಾನು ಚೆಕ್ ನ್ನು ಇಟ್ಟಿದ್ದೆ ಅದನ್ನು ಫಿರ್ಯಾದಿ ಕಳ್ಳತನ

ಮಾಡಿಕೊಂಡು ಹೋಗಿದ್ದಾರೆ ಎಂದು ಹೇಳಿದ್ದು, ಅದೇ ರೀತಿ ನಾನು ಚೆಕ್ ನ್ನು ಕ್ಯಾಶ್ ಡ್ರಾಯರ್ ನಲ್ಲಿ ಸಹಿ ಮಾಡಿ ಇಡುವ ಅಭ್ಯಾಸ ಇಟ್ಟುಕೊಂಡಿರುವುದಿಲ್ಲ. ಈ ಒಂದು ಚೆಕ್ ನ್ನು ಮಾತ್ರ ನಾನು ಆ ರೀತಿ ಇಟ್ಟಿದ್ದೆ ಎಂದು ಹೇಳುತ್ತಾರೆ. ನಮ್ಮ ಕಚೇರಿಯಲ್ಲಿ ಕ್ಯಾಶ್ ಡ್ರಾಯರ್ ಇರುವಂತಹ ಕೋಣೆಯೇ ಬೇರೆ ಮತ್ತು ವಸ್ತುಗಳನ್ನು ಇಡಲು ಬೇರೆ ಕೋಣೆ ಇದೆ. ನಾನು ಕ್ಯಾಶ್ ಡ್ರಾಯರ್ ಗೆ ಬೀಗ ಹಾಕುತ್ತಿರಲಿಲ್ಲ ಎಂದು ಹೇಳಿದ್ದು, ಮುಖ್ಯದ್ವಾರಕ್ಕೂ ಸಹ ಅಂಗಡಿಯ ಹತ್ತಿರದಲ್ಲಿದ್ದರೇ ಹಾಕುವುದಿಲ್ಲ ಆದರೆ ಹೊರಗಡೆ ಹೋದಾಗ ಬೀಗ ಹಾಕುತ್ತೇನೆ. ಫಿರ್ಯಾದಿ ನಾನು ಹೇಳಿದಂತೆ ನಮ್ಮ ಅಂಗಡಿಯ ಕ್ಯಾಶ್ ಡ್ರಾಯರ್ ಇರುವ ಕೋಣೆಗೆ ಬಂದಿರಲಿಲ್ಲ ಮತ್ತು ನಾನು ಹೇಳಿದಂತೆ ಚೆಕ್ ನ್ನು ಕದ್ದಿರಲಿಲ್ಲ ಎಂದರೆ ಸರಿಯಲ್ಲ. ನಾನು ಈ ಪ್ರಕರಣಕ್ಕಾಗಿ ದಾಖಲೆಗಳನ್ನು ಸೃಷ್ಟಿ ಮಾಡಿ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಸದರಿ ದಾಖಲೆಗಳಿಗೂ ಹಾಗೂ ಈ ಪ್ರಕರಣಕ್ಕೂ ಯಾವುದೇ ಸಂಬಂದ ಇಲ್ಲ ಎಂದರೆ ಸರಿಯಲ್ಲ. ಹಣ ಕೊಡುವುದನ್ನು ತಪ್ಪಿಸಿಕೊಳ್ಳುವ ಉದ್ದೇಶದಿಂದ ಸುಳ್ಳು ದಾಖಲೆಗಳನ್ನು ಸೃಷ್ಟಿ ಮಾಡಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

Re-Examination NIL

**(R.O.A & I.C.)**

sd/-
**(Mohamed Arifulla C.F)**
SENIOR CIVIL JUDGE JMFC,
TIPTUR